## ಮಾತು ಕಟ್ಟೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಏನು ಹೇಳುತ್ತಾರೋ, ಬಿಡುತ್ತಾರೋ? ಗೊತ್ತಿಲ್ಲ. ಆದರೆ, ಅವರ ಸರ್ಕಾರದಿಂದ ಒಳ್ಳೆಯದನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ರಾಜ್ಯದ ಜನತೆ ಕಾಂಗ್ರೆಸ್ ಆಡಳಿತದಿಂದ ಬೇಸತ್ತು ಹೋಗಿದ್ದಾರೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬರುವುದು ಶತಃಸಿದ್ಧ.

- ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ

@vishwavaninews vishwavanitimely epaper.vishwavani.news vishwavani.news

## ಸಣ್ ಸುದ್ದಿ

### ಕೆ.ಆರ್.ಕ್ಷೇತ್ರದಲ್ಲಿ ಪಕ್ಷ ಸಂಘಟಿಸಿ



**ಮೈಸೂರು:** ಕೆ.ಆರ್.ಕ್ಷೇತ್ರದಲ್ಲಿ ಸಂಘಟನೆ ಕೊರತೆ ಇರುವುದರಿಂದ ಜೆಡಿಎಸ್ ಅಭ್ಯರ್ಥಿಯ ಗೆಲುವಿಗೆ ಕಷ್ಟವಾಗುತ್ತಿದೆ. ಮುಂದಿನ ದಿನಗಳಲ್ಲಿ ಸಂಘಟನಾತ್ಮಕವಾಗಿ ಹೋರಾಟ ಮಾಡಿದರೆ, ಗೆಲುವು ಕಷ್ಟವಾಗುವುದಿಲ್ಲ. ಪಕ್ಷಕ್ಕಾಗಿ ದುಡಿದ ಹಿರಿಯರನ್ನು ಸಂಘಟನೆಗೆ ಕರೆತಂದು ಅವರಿಂದ ಸಲಹೆ ಪಡೆದು ಹೋರಾಟ ಮಾಡಿದರೆ ಪಕ್ಷ ಬಲವರ್ಧನೆಗೊಳ್ಳಲಿದೆ. ಎಲ್ಲರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ವಿಧಾನ ಪರಿಷತ್ ಉಪ ಸಭಾಪತಿ ಮರಿತಿಬ್ಬೇಗೌಡ ಹೇಳಿದರು.

### ವರಿಷ್ಠರಿಂದ ಟಿಕೆಟ್ ಭರವಸೆ ಸಿಕ್ಕಿದೆ

**ಭದ್ರಾವತಿ:** ಕಾಂಗ್ರೆಸ್‌ಗಾಗಿ 20 ವರ್ಷಗಳಿಂದ ಪ್ರಾಮಾಣಿಕವಾಗಿ ದುಡಿದು ಪಕ್ಷದ ನಾನಾ ಹುದ್ದೆಗಳನ್ನು ಅಲಂಕರಿಸಿರುವ ನನಗೆ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಸಿಗುವ ಭರವಸೆ ವರಿಷ್ಠರಿಂದ ದೊರೆತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಿ. ಆರ್.ಪ್ರವೀಣ್ ಪಟೇಲ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕ್ಷೇತ್ರದಲ್ಲಿ ಪಕ್ಷದ ಸಂಘಟನೆಯಲ್ಲಿ ತೊಡಗಿದ್ದೇನೆ. ಸ್ಥಳೀಯ ಮುಖಂಡರು ಸಹ ನನಗೆ ಒತ್ತಾಸೆಯಾಗಿದ್ದಾರೆ. ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಕೆಪಿಸಿಸಿ ಮುಖಂಡರು ಕ್ಷೇತ್ರದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಸೂಚಿಸಿದ್ದು, ಟಿಕೆಟ್ ಕುರಿತು ಭರವಸೆ ನೀಡಿದ್ದಾರೆ ಎಂದರು.

### ಕಳ್ಳರು ಮತ ಕೇಳಲು ಬರ್ತ್ತಾರೆ ಎಚ್ಚರ!



**ಹೊಸನಗರ:** ಬ್ಯಾಂಕ್ ಮುಳುಗಡೆ ಮಾಡಲು ಹೊರಟ ಠಕ್ಕರು ಮುಂದಿನ ವಿಧಾನಸಭಾ ಚುನಾವಣೆ ಅಭ್ಯರ್ಥಿಯಾಗಿ ಮತ ಕೇಳಲು ಬರ್ತ್ತಾರೆ ಎಚ್ಚರವಿರಲಿ ಎಂದು ಶಾಸಕ ಕಿಮ್ಮನೆ ರತ್ನಾಕರ ಲೇವಡಿ ಮಾಡಿದ್ದಾರೆ.

ತಾಲೂಕಿನ ರಾಮಚಂದ್ರಾಪುರ ಗ್ರಾಮ ಪಂಚಾಯ್ತಿ ಕಚೇರಿಯ ನೂತನ ಕಟ್ಟಡ ಶಂಕುಸ್ಥಾಪನೆ ವೇಳೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್. ಎಂ. ಮಂಜುನಾಥ್ ಗೌಡರ ಹೆಸರು ಪ್ರಸ್ತಾಪಿಸದೆ ಪರೋಕ್ಷವಾಗಿ ಟಾಂಗ್ ನೀಡಿದರು.

ರೈತರ ಬಂಗಾರ ಲಪಟಾಯಿಸಿ ಡಿಸಿಸಿ ಬ್ಯಾಂಕ್ ನಷ್ಟಕ್ಕೆ ಕಾರಣರಾದ ಜೈಲಿಗೂ ಹೋಗಿ ಬಂದ ಬ್ಯಾಂಕಿನ ಅಧ್ಯಕ್ಷರಿಗೆ ಕ್ಷೇತ್ರದ ಶಾಸಕತ್ವ ದೊರೆತರೆ ಏನೆಲ್ಲಾ ಕೊಳ್ಳೆ ಹೊಡೆಯಬಹುದು ಎಂಬ ಊಹೆ ಮತದಾರರಿಗೆ ಬಿಟ್ಟದ್ದು ಎಂದರು.

ಗ್ರಾಮ ಪಂಚಾಯ್ತಿ ಸದಸ್ಯರಿಂದ ಹಿಡಿದು ವಿವಿಧ ಹಂತದ ಹಾಲಿ ಹಾಗೂ ಮಾಜಿ ಜನಪತ್ರಿನಿಧಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳನ್ನು ಖರೀದಿ ಮಾಡುವ ಖರೀದಿ ಕೇಂದ್ರವಾಗಿ ಜೆಡಿಎಸ್ ಇಲ್ಲಿ ಬಿಂಬಿತವಾಗುತ್ತಿದೆ. ಮತದಾರರು ಈ ಖರೀದಿ ಕೇಂದ್ರಗಳನ್ನು ನಿಲ್ಲಿಸದಿದ್ದರೆ ನಾಳೆ ಕ್ಷೇತ್ರವೂ ಮಾರಾಟವಾಗಲಿದೆ ಎಂದು ಮಾರ್ಮಿಕ ಮಾತುಗಳಿಂದ ಕಾಂಗ್ರೆಸ್ ಬಿಟ್ಟು ಜೆಡಿಎಸ್ ಅಭ್ಯರ್ಥಿಯಾಗಲಿರುವ ಆರ್.ಎಂ.ಮಂಜುನಾತ್ ಗೌಡರ ಕುರಿತು ಹೇಳಿದರು.

### ರಾಜಕಾರಣ ಜನಸೇವೆಗೆ ಉತ್ತಮ ಮಾರ್ಗ

**ಚಿಕ್ಕಮಗಳೂರು:** ರಾಜಕಾರಣ ನನ್ನ ಕಸುಬಲ್ಲ, ಜನರ ಸೇವೆ ಮಾಡಲು ಅದೊಂದು ಉತ್ತಮ ಮಾರ್ಗ ಎಂದು ಭಾವಿಸಿ ಜನಪ್ರತಿನಿಧಿಯಾಗಲು ಮುಂದಾಗಿದ್ದೇನೆ ಎಂದು ಜೆಡಿಎಸ್ ಸಂಭವನೀಯ ಅಭ್ಯರ್ಥಿ ಬಿ.ಎಚ್.ಹರೀಶ್ ಹೇಳಿದರು.

ನಗರ ಹೊರವಲಯದ ನರಿಗುಡ್ಡನಹಳ್ಳಿಯಲ್ಲಿ ನಡೆದ ಮನೆ-ಮನೆಗೆ ಕುಮಾರಣ್ಣ ಕಾರ್ಯಕ್ರಮದಲ್ಲಿ ಮಾತನಾಡಿ, ಮುಂಬರುವ ಚುನಾವಣೆಯಲ್ಲಿ ಜನತೆ ಆಶೀರ್ವದಿಸಿದಲ್ಲಿ ಅಧಿಕಾರವನ್ನು ಜನಸೇವೆಯೆಂದು ತಿಳಿದು ಕ್ಷೇತ್ರದ ಅಭಿವೃದ್ದಿಗೆ ಪ್ರಾಮಾಣಿಕವಾಗಿ ದುಡಿಯುತ್ತೇನೆ.

ಶಾಸಕನಾದಲ್ಲಿ ಕ್ಷೇತ್ರದ ಶಾಂತಿ, ನೆಮ್ಮದಿ, ಭಾವೈಕ್ಯತೆ ಮತ್ತು ಅಭಿವೃದ್ದಿಗೆ ಶಕ್ತಿಮೀರಿ ಕೆಲಸ ಮಾಡುತ್ತೇನೆ. ಭ್ರಷ್ಟಾಚಾರ ರಹಿತವಾಗಿ ದುಡಿಯುತ್ತೇನೆ.

ವೀರಶೈವರು, ಲಿಂಗಾಯಿತರು ಸೇರಿದಂತೆ ಎಲ್ಲ ಸಮುದಾಯದ ಜನ ಚುನಾವಣೆಯಲ್ಲಿ ನನ್ನ ಕೈ ಹಿಡಿಯುವುದಾಗಿ ನಂಬಿದ್ದೇನೆ ಎಂದು ಹೇಳಿದರು.

### ಚಕ್‌ಪೋಸ್ಟ್‌ನಲ್ಲಿ ಕಟ್ಟೆಚ್ಚರಕ್ಕೆ ಡಿಸಿ ಸೂಚನೆ

**ಕೋಲಾರ:** ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳಲ್ಲಿ ಪೊಲೀಸ್ ಮತ್ತು ಅಬಕಾರಿ ಇಲಾಖೆ ಜಂಟಿ ಕಾರ್ಯಪಡೆ ನೇತೃತ್ವದಲ್ಲಿ ತಾತ್ಕಾಲಿಕ ಚೆಕ್ ಪೋಸ್ಟ್ ಸ್ಥಾಪಿಸುವ ಮೂಲಕ ಕಟ್ಟೆಚ್ಚರ ವಹಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಸತ್ಯವತಿ ಹೇಳಿದರು. ಮುಂಬರುವ ವಿಧಾನಸಭೆ ಚುನಾವಣೆ ಹಿನ್ನೆಲೆ ಆಂಧ್ರ ಮತ್ತು ತಮಿಳುನಾಡು ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿ ಮಾತನಾಡಿ, ಚುನಾವಣೆ ಸಮಯದಲ್ಲಿ ಅಕ್ರಮ ಹಣ, ಮದ್ಯ ಹಾಗೂ ಉಡುಗೊರೆಗಳು ವಿತರಣೆ ಆಗದಂತೆ ಕಟ್ಟೆಚ್ಚರ ಕೈಗೊಳ್ಳಬೇಕೆಂದು ಸೂಚಿಸಿದರು.

ಚುನಾವಣೆಗೆ ಮೊದಲೇ ಮದ್ಯ, ಹಣ, ವಸ್ತುಗಳನ್ನು ದಾಸ್ತಾನು ಮಾಡಿಕೊಳ್ಳುವ ಅಪಾಯ ಇರುವುದರಿಂದ ಈಗಿನಿಂದಲೇ ಚೆಕ್‌ಪೋಸ್ಟ್‌ನಲ್ಲಿ ಜಾಗೃತರಾಗಿರಬೇಕು. ಕರ್ನಾಟಕಕ್ಕೆ ಆಂಧ್ರ ಮತ್ತು ತಮಿಳುನಾಡು ಗಡಿ ಆಗಿರುವುದ ರಿಂದಾಗಿ ನೆರೆ ರಾಜ್ಯಗಳ ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಕಟ್ಟೆಚ್ಚರ ವಹಿಸ ಬೇಕಾಗಿದೆ ಎಂದರು.

ಕರ್ನಾಟಕ, ಆಂಧ್ರ, ತಮಿಳುನಾಡು ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ವ್ಯಾಟ್ಸ್ ಆಪ್ ಗ್ರೂಪ್ ರಚನೆ ಮಾಡಿ, ಕಾನೂನು, ಸುವ್ಯವಸ್ಥೆ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳಬೇಕು ಎಂದರು.




# ಕೋಲಾರ: ಯಾರ ಕೊರಳಿಗೆ ವಿಜಯದ ಹಾರ?

ಕೋಲಾರ ಲೋಕಸಭಾ ಕ್ಷೇತ್ರವು ಕೋಲಾರ ಮತ್ತು ಚಿಕ್ಕಬಳ್ಳಾಪುರ ಅವಳಿ ಜಿಲ್ಲೆಗಳನ್ನು ಒಳಗೊಂಡಿದ್ದು, ಜಿದ್ದಾಜಿದ್ದಿನ ಅಖಾಡವಾಗಿದೆ. ಸಂಸದ ಕೆ.ಎಚ್. ಮುನಿಯಪ್ಪ ಸತತ 7 ಬಾರಿಯಿಂದ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 8 ವಿಧಾನಸಭಾ ಕ್ಷೇತ್ರಗಳಲ್ಲಿ 3 ಜೆಡಿಎಸ್, 2 ಕಾಂಗ್ರೆಸ್, ಒಂದು ಬಿಜೆಪಿ ಹಾಗೂ ಇಬ್ಬರು ಪಕ್ಷೇತರ ಶಾಸಕರಿದ್ದಾರೆ. ಬಂಗಾರಪೇಟೆ ಕ್ಷೇತ್ರವನ್ನು ಎಸ್.ಎನ್.ನಾರಾಯಣಸ್ವಾಮಿ (ಕಾಂಗ್ರೆಸ್) ಪ್ರತಿನಿಧಿಸುತ್ತಿದ್ದು, ಮಾವಿನನಾಡಿನ ಶ್ರೀನಿವಾಸಪುರದಲ್ಲಿ ಸಚಿವ ಕೆ.ಆರ್.ರಮೇಶ್ ಕುಮಾರ್(ಕಾಂಗ್ರೆಸ್) ವಿರಾಜಮಾನರಾಗಿದ್ದಾರೆ. ಮಾಲೂರಿನಲ್ಲಿ ಕೆ.ಎಸ್.ಮಂಜುನಾಥ ಗೌಡ, ಚಿಂತಾಮಣಿಯಲ್ಲಿ ಕೃಷ್ಣಾರೆಡ್ಡಿ ಮತ್ತು ಶಿಡ್ಲಘಟ್ಟದಲ್ಲಿ ರಾಜಣ್ಣ ಜೆಡಿಎಸ್‌ನಿಂದ ಆಯ್ಕೆ ಯಾಗಿದ್ದಾರೆ. ಕೋಲಾರ ಕ್ಷೇತ್ರದ ವರ್ತೂರ್ ಆರ್.ಪ್ರಕಾಶ್ ಮತ್ತು ಮುಳಬಾಗಿಲಿನ ಕೊತ್ತೂರು ಮಂಜುನಾಥ್ ಪಕ್ಷೇತರ ಶಾಸಕರಾಗಿದ್ದು ಅವಳಿ ಜಿಲ್ಲೆಯ ಏಕೈಕ ಬಿಜೆಪಿ ಶಾಸಕಿ ವೈ. ರಾಮಕ್ಕ ಚಿನ್ನದನಾಡು ಕೆಜಿಎಫ್ ನಲ್ಲಿ ಕಮಲ ಅರಳಿಸಿದ್ದಾರೆ. ಈ ಬಗ್ಗೆ **ಕೆ.ಎಸ್.ಮಂಜುನಾಥ ರಾವ್ ಕೋಲಾರ** ಸಮಗ್ರ ವಿಶ್ಲೇಷಣೆ ನೀಡಿದ್ದಾರೆ.

## ಕೋಲಾರ



ವರ್ತೂರ್ ಪ್ರಕಾಶ್ | ಕೆ. ಶ್ರೀನಿವಾಸಗೌಡ | ನಾಚಳ್ಳಿ ವೆಂಕಟರೆಡ್ಡಿ

ಜನತಾದಳದ ಭದ್ರಕೋಟೆಯಾಗಿದ್ದ ಕೋಲಾರ ವಿಧಾನಸಭಾ ಕ್ಷೇತ್ರವು ಸಿ.ಭೈರೇಗೌಡರ ನಿಧನದ ನಂತರ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಕಾಂಗ್ರೆಸ್ ಪಾಲಾಗಿದ್ದು ಇತಿಹಾಸ. ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಕಾಂಗ್ರೆಸ್‌ನಿಂದ ವರ್ತೂರು ಪ್ರಕಾಶ್ ಅಭ್ಯರ್ಥಿ ಆಗಿದ್ದಾರೆ. ಹೊಸಕೋಟೆ ಶಾಸಕ ಎಂಟಿಬಿ ನಾಗರಾಜ್ ಪುತ್ರ ನಿತಿನ್‌ಪುರುಷೋತ್ತಮ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಟಿಕೆಟ್ ಬಹುತೇಕ ಗಟ್ಟಿ ಮಾಡಿದ್ದರೂ ಸಂಸದ ಕೆ.ಎಚ್.ಮುನಿಯಪ್ಪ ಅಸಮಾಧಾನ ಸೂಚಿಸಿದ್ದು, ಮೂಲಕ ನಿವೃತ್ತ ಐಎಎಸ್ ಅಧಿಕಾರಿ ಮಾಗಡಿಯ ಸೈಯ್ಯದ್ ಜಮೀರ್ ಪಾಷ ಪರ ನಿಂತಿದ್ದಾರೆ. ಜೆಡಿಎಸ್ ಟಿಕೆಟ್‌ಗೆ ಮಾಜಿ ಸಚಿವ ಕೆ.ಶ್ರೀನಿವಾಸಗೌಡ, ಬಿಜೆಪಿಯಿಂದ ನಾಚಳ್ಳಿ ವೆಂಕಟರೆಡ್ಡಿ ಮತ್ತು ಓಂಶಕ್ತಿ ಚಲಪತಿ ಹಪಾಹಪಿ ನಡೆಸುತ್ತಿದ್ದಾರೆ.

### ಜಿಪಂ ಕ್ಷೇತ್ರ

| | | | |
|---|---|---|---|
| ಸುಗಟೂರು | ಜೆಡಿಎಸ್ | ನರಸಾಪುರ | ಕಾಂಗ್ರೆಸ್ |
| ವೇಮಗಲ್ | ಕಾಂಗ್ರೆಸ್ | ವಕ್ಕಲೇರಿ | ಕಾಂಗ್ರೆಸ್ |
| ಹೋಳೂರು | ಜೆಡಿಎಸ್ | ಕ್ಯಾಲನೂರು | ಕಾಂಗ್ರೆಸ್ |
| ಹುತ್ತೂರು | ಕಾಂಗ್ರೆಸ್ | ಕೋಲಾರ ನಗರಸಭೆ | ಕಾಂಗ್ರೆಸ್ |

### ಹಿಂದಿನ ಫಲಿತಾಂಶ

2008ರ ಚುನಾವಣೆಯಲ್ಲಿ ಮಾಜಿ ಸಚಿವ ಕೆ. ಶ್ರೀನಿವಾಸ ಗೌಡರನ್ನು 21,029 ಮತಗಳ ಅಂತರದಿಂದ ಸೋಲಿಸಿದ ವರ್ತೂರ್ ಪ್ರಕಾಶ್ 2013ರಲ್ಲಿ ಮತ್ತೇ ಅವರನ್ನು 12,591 ಮತದಿಂದ ಮಣಿಸಿ ಆಯ್ಕೆ ಆಗಿದ್ದಾರೆ. ಶ್ರೀನಿವಾಸಗೌಡರು ಕಾಂಗ್ರೆಸ್ ಹಾಗೂ ಜೆಡಿಎಸ್ ಹೀಗೆ ಎರಡೂ ಪಕ್ಷದಿಂದಲೂ ವರ್ತೂರ್ ವಿರುದ್ಧ ಸೋತಿದ್ದಾರೆ. 2013 ರಲ್ಲಿ ವರ್ತೂರ್ ಪ್ರಕಾಶ್ 62,957 ಮತ ಪಡೆದರೆ ಶ್ರೀನಿವಾಸಗೌಡ 50,366 ಮತ ಪಡೆದುಕೊಂಡಿದ್ದರು. 2008ರಲ್ಲಿ ವರ್ತೂರ್ ಪ್ರಕಾಶ್ 66,446 ಮತ ಹಾಗೂ ಗೌಡರು 45,417 ಮತಗಳನ್ನು ಪಡೆದಿದ್ದಾರೆ.

## ಕೆಜಿಎಫ್



ಸಂಪಂಗಿ | ರೂಪಾಶಶಿಧರ್ | ಭಕ್ತವತ್ಸಲಂ

ಚಿನ್ನದನಾಡಿನ ಶಾಸಕಿ ವೈ.ರಾಮಕ್ಕ ಅವರು ಜಿಲ್ಲೆಯ ಏಕೈಕ ಬಿಜೆಪಿ ಶಾಸಕಿಯಾಗಿದ್ದಾರೆ. ಈ ಬಾರಿ ಚುನಾವಣೆಯಲ್ಲಿ ಪುತ್ರ ಮಾಜಿ ಶಾಸಕ ವೈ. ಸಂಪಂಗಿ ಅವರನ್ನು ಕಣಕ್ಕಿಳಿಸಲು ಯೋಜನೆ ಸಿದ್ಧಪಡಿಸಿದ್ದಾರೆ. ಸಂಸದ ಕೆ.ಎಚ್.ಮುನಿಯಪ್ಪ ಅವರ ಪುತ್ರಿ ರೂಪಾಶಶಿಧರ್ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದು, ಆಹಾರ ನಿಗಮದ ಉಪಾಧ್ಯಕ್ಷ ಶ್ರೀನಿವಾಸ್ ಪೈಪೋಟಿ ನೀಡುತ್ತಿದ್ದಾರೆ. ಜೆಡಿಎಸ್ ಅಭ್ಯರ್ಥಿ ಭಕ್ತವತ್ಸಲಂ ಎನ್ನಲಾಗುತ್ತದ್ದರೂ, ಕೋಲಾರದ ಸುಕನ್ಯಾ ಗೋವಿಂದಪ್ಪ ಈಗಾಗಲೇ ಚುನಾವಣೆ ಪ್ರಚಾರ ನಡೆಸುತ್ತಿದ್ದಾರೆ.

| | |
|---|---|
| ಕೆಜಿಎಫ್ ಪುರಸಭೆ | ಕಾಂಗ್ರೆಸ್ |

### ಹಿಂದಿನ ಫಲಿತಾಂಶ

ಬಿಜೆಪಿಯ ವೈ.ರಾಮಕ್ಕ 2013ರಲ್ಲಿ ಕಮಲ ಜೆಡಿಎಸ್‌ನ ಭಕ್ತವತ್ಸಲಂ ಅವರನ್ನು 26,022 ಮತಗಳ ಅಂತರದಿಂದ ಸೋಲಿಸಿದ್ದರು. ರಾಮಕ್ಕ 55,014 ಹಾಗೂ ಭಕ್ತವತ್ಸಲಂ 28,992 ಮತ ಗಳಿಸಿದ್ದರು. 2008ರಲ್ಲಿ ರಾಮಕ್ಕ ಅವರ ಪುತ್ರ ವೈ.ಸಂಪಂಗಿ ಅವರು ಬಿಜೆಪಿಯಿಂದ ಸ್ಪರ್ಧಿಸಿದ್ದು ಜೆಡಿಎಸ್‌ನ ಭಕ್ತವತ್ಸಲಂ ಅವರನ್ನು 4,114 ಮತಗಳ ಅಂತರದಿಂದ ಮಣಿಸಿದ್ದರು.

## ಮಾಲೂರು



ಮಂಜುನಾಥ ಗೌಡ | ನಂಜೇಗೌಡ | ಕೃಷ್ಣಯ್ಯಶೆಟ್ಟಿ

ಶಾಸಕ ಕೆ.ಎಸ್.ಮಂಜುನಾಥಗೌಡ ಜಿಪಂ, ತಾಪಂ ಚುನಾವಣೆಯಲ್ಲಿ ಪ್ರಾಬಲ್ಯ ಮೆರೆದಿದ್ದು, ಈ ಬಾರಿಯೂ ತೆನೆ ಹೊರಲು ಸಿದ್ಧತೆ ನಡೆಸಿದ್ದಾರೆ. ಕಾಂಗ್ರೆಸ್‌ನಿಂದ ಕೆ.ವೈ.ನಂಜೇ ಗೌಡ ಹಾಗೂ ಬಿಜೆಪಿಯಿಂದ ಮಾಜಿ ಸಚಿವ ಕೃಷ್ಣಯ್ಯಶೆಟ್ಟರ ಸ್ಪರ್ಧೆ ಖಚಿತವಾಗಿದೆ. ಚುನಾವಣೆ ಸಿದ್ಧತೆ ಭರ್ಜರಿಯಾಗಿ ನಡೆಯುತ್ತಿದ್ದು, ಈಗಾಗಲೇ ಹಣದ ಹೊಳೆ ಹರಿಯುತ್ತಿದೆ.

### ಜಿಪಂ ಕ್ಷೇತ್ರ

| | | | |
|---|---|---|---|
| ಕುಡಿಯನೂರು | ಜೆಡಿಎಸ್ | ಟೇಕಲ್ | ಜೆಡಿಎಸ್ |
| ಲಕ್ಕೂರು | ಜೆಡಿಎಸ್ | ತೊರ್ನಹಳ್ಳಿ | ಜೆಡಿಎಸ್ |
| ಮಾಸ್ತಿ | ಜೆಡಿಎಸ್ | ಮಾಲೂರು ಪುರಸಭೆ | ಜೆಡಿಎಸ್ |

### ಹಿಂದಿನ ಫಲಿತಾಂಶ

2013 ಚುನಾವಣೆಯಲ್ಲಿ ಮಂಜುನಾಥ ಗೌಡ 18,769 ಮತಗಳ ಅಂತರದಿಂದ ಪಕ್ಷೇತರ ಅಭ್ಯರ್ಥಿಯಾಗಿದ್ದ ಮಾಜಿ ಸಚಿವ ಎಸ್.ಎನ್.ಕೃಷ್ಣಯ್ಯಶೆಟ್ಟ ಅವರನ್ನು ಸೋಲಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು. ಮಂಜುನಾಥಗೌಡ 57,645 ಹಾಗೂ ಕೃಷ್ಣಯ್ಯಶೆಟ್ಟಿ 38,876 ಮತ ಪಡೆದಿದ್ದರು. 2008ರ ಚುನಾವಣೆಯಲ್ಲಿ ಬಿಜೆಪಿಯಲ್ಲಿದ್ದ ಕೃಷ್ಣಯ್ಯಶೆಟ್ಟಿ ಜೆಡಿಎಸ್‌ನ ಪ್ರಭಾಕರ್ ಅವರನ್ನು 52,401 ಮತಗಳ ಅಂತರಿಂದ ಮಣಿಸಿದ್ದರು.

## ಶ್ರೀನಿವಾಸಪುರ



ರಮೇಶ್ ಕುಮಾರ್ | ವೆಂಕಟಶಿವಾರೆಡ್ಡಿ

ಮಾವಿನನಾಡು ಶ್ರೀನಿವಾಸಪುರ ಕ್ಷೇತ್ರದಲ್ಲಿ ಒಮ್ಮೆ ರೆಡ್ಡಿ ಮತ್ತೊಮ್ಮೆ ಸ್ವಾಮಿ ಎಂಬುದು ಸಾಂಪ್ರದಾಯಿಕ ಆಯ್ಕೆ. ದಶಕಗಳಿಂದಲೂ ಸ್ಥಳೀಯ ಪರಂಪರೆ ಬದಲಾಗಿಲ್ಲ. ಇದೀಗ ಆರೋಗ್ಯ ಸಚಿವ ಕೆ.ಆರ್.ರಮೇಶ್ ಕುಮಾರ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದು, 18 ಸಾವಿರ ಮನೆಗಳ ನಿರ್ಮಾಣದ ಮೂಲಕ ಇಡೀ ರಾಜ್ಯದ ಗಮನ ಸೆಳೆದಿದ್ದಾರೆ. ಯೂನಿವರ್ಸಲ್ ಹೆಲ್ತ್ ಕಾರ್ಡ್ ಮೂಲಕ ರಾಜ್ಯದ ಜನರಿಗೆ ಉಚಿತ ಚಿಕಿತ್ಸೆ ಒದಗಿಸುವ ನೂತನ ಯೋಜನೆ ಇವರದೇ ಪರಿಕಲ್ಪನೆ. ಹೀಗಾಗಿ ಸ್ವಾಮಿಗೆ ಕಾಂಗ್ರೆಸ್ ಟಿಕೆಟ್ ಗಟ್ಟಿ ಆಗಿದ್ದು ಎದುರಾಳಿಗಳೇ ಇಲ್ಲ. ರಮೇಶ್ ಕುಮಾರ್ ಪಾರಂಪರಿಕ ವೈರಿ ಮಾಜಿ ಶಾಸಕ ಜಿ.ಕೆ. ವೆಂಕಟಶಿವಾರೆಡ್ಡಿ ಜೆಡಿಎಸ್‌ನಿಂದ ಸ್ಪರ್ಧಿಸುತ್ತಿದ್ದು, ಬಿಜೆಪಿ ಟಿಕೆಟ್‌ಗಾಗಿ ಮುಳಬಾಗಲು ಕ್ಷೇತ್ರದ ಮಲ್ಲನಾಯಕನಹಳ್ಳಿ ವಾಸು ಯತ್ನಿಸುತ್ತಿದ್ದಾರೆ.

### ಜಿಪಂ ಕ್ಷೇತ್ರ

| | | | |
|---|---|---|---|
| ದಳಸನೂರು | ಜೆಡಿಎಸ್ | ರೋಣೂರು | ಜೆಡಿಎಸ್ |
| ಗೌನಿಪಲ್ಲಿ | ಜೆಡಿಎಸ್ | ಯಲ್ದೂರು | ಕಾಂಗ್ರೆಸ್ |
| ರಾಯಲ್ಪಾಡು | ಕಾಂಗ್ರೆಸ್ | ಪುರಸಭೆ | ಕಾಂಗ್ರೆಸ್ |

### ಹಿಂದಿನ ಫಲಿತಾಂಶ

2013ರಲ್ಲಿ ಕಾಂಗ್ರೆಸ್‌ನ ರಮೇಶ್ ಕುಮಾರ್ 3,893 ಮತಗಳ ಅಂತರದಿಂದ ಜೆಡಿಎಸ್‌ನ ವೆಂಕಟಶಿವಾರೆಡ್ಡಿ ಅವರನ್ನು ಮಣಿಸಿದ್ದರು. ರಮೇಶ್ ಕುಮಾರ್ 83,426 ಹಾಗೂ ವೆಂಕಟಶಿವಾರೆಡ್ಡಿ 79,533 ಮತ ಪಡೆದಿದ್ದರು. 2008ರಲ್ಲಿ ಜೆಡಿಎಸ್ ಅಭ್ಯರ್ಥಿ ವೆಂಕಟಶಿವಾರೆಡ್ಡಿ 3,669 ಮತಗಳಿಂದ ಗೆದ್ದಿದ್ದರು. ವೆಂಕಟಶಿವಾರೆಡ್ಡಿ 70,282 ಮತ್ತು ರಮೇಶ್ ಕುಮಾರ್ 66,613 ಮತ ಗಳಿಸಿದ್ದರು.

## ಮುಳಬಾಗಿಲು



ಕೊತ್ತೂರು ಮಂಜುನಾಥ

ಪಕ್ಷೇತರ ಶಾಸಕ ಕೊತ್ತೂರು ಮಂಜುನಾಥ್ ಕಾಂಗ್ರೆಸ್ ಸಹ ಸದಸ್ಯರಾಗಿದ್ದು ಜಿಪಂ ಮತ್ತು ತಾಪಂ ನ್ನುಕೈವಶ ಮಾಡಿಕೊಂಡು ಹವಾ ಎಬ್ಬಿಸಿ ಮುಂದಿನ ಚುನಾವಣೆಗೆ ಕಾಂಗ್ರೆಸ್ ಟಿಕೆಟ್ ಗಟ್ಟಿ ಮಾಡಿಕೊಂಡಿದ್ದರೂ, ಜಾತಿ ಪ್ರಮಾಣಪತ್ರದ ಬಗ್ಗೆ ನ್ಯಾಯಾಲಯ ನೀಡುವ ತೀರ್ಪಿನ ಆಧಾರದ ಮೇಲೆ ಸ್ಪರ್ಧೆ ನಿರ್ಧಾರ ಆಗಲಿದೆ. ಜೆಡಿಎಸ್ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದ್ದು ಸಂಸದ ಕೆ.ಎಚ್.ಮುನಿಯಪ್ಪ ಅಳಿಯ ಪೆದ್ದನ್ನ, ನಿವೃತ್ತ ಉಪ ವಿಭಾಗಾಧಿಕಾರಿ ಚಿಕ್ಕವೆಂಕಟಪ್ಪ, ಆದಿನಾರಾಯಣ, ಸಿ.ವಿ. ಗೋಪಾಲ್ ಹೆಸರು ಕೇಳಿಬರುತ್ತಿದೆ. ಬಿಜೆಪಿಯಲ್ಲಿ ಎನ್.ಎಸ್. ವೆಂಕಟೇಶ್,ವೇಣುಗೋಪಾಲ್,ಕೆ.ಎಂ.ಶ್ರೀನಿವಾಸ್, ಕೀಲಗಾಣಿ ನಾರಾಯಣಪ್ಪ ಪೈಪೋಟಿ ನೀಡುತ್ತಿದ್ದಾರೆ.

### ಜಿಪಂ ಕ್ಷೇತ್ರ

| | | | |
|---|---|---|---|
| ಆವಣಿ | ಕಾಂಗ್ರೆಸ್ | ತಾಯಲೂರು | ಕಾಂಗ್ರೆಸ್ |
| ಬೈರಕೂರು | ಕಾಂಗ್ರೆಸ್ | ಆಲಂಗೂರು | ಕಾಂಗ್ರೆಸ್ |
| ದುಗ್ಗಸಂದ್ರ | ಕಾಂಗ್ರೆಸ್ | ನಗರಸಭೆ | ಜೆಡಿಎಸ್ |
| ಪದ್ಮಘಟ್ಟ | ಕಾಂಗ್ರೆಸ್ | | |

### ಹಿಂದಿನ ಫಲಿತಾಂಶ

2013ರಲ್ಲಿ ಪಕ್ಷೇತರ ಶಾಸಕ ಕೊತ್ತೂರು ಮಂಜುನಾಥ್ 33,734 ಮತಗಳ ಅಂತರದಿಂದ ಜೆಡಿಎಸ್‌ನ ಮುನಿಆಂಜಪ್ಪ ಅವರನ್ನು ಸೋಲಿಸುವ ಮೂಲಕ ಶಾಸಕರಾದರು. ಮಂಜುನಾಥ್ 73,146 ಹಾಗೂ ಮುನಿಆಂಜಪ್ಪ 39,412 ಮತ ಪಡೆದಿದ್ದರು. 2008ರಲ್ಲಿ ಕಾಂಗ್ರೆಸ್‌ನ ಅಮರೇಶ್ ಅವರು ಜೆಡಿಎಸ್‌ನ ಮುನಿಆಂಜಪ್ಪ ಅವರನ್ನು 1,854 ಮತಗಳ ಅಂತರದಿಂದ ಮಣಿಸಿದ್ದರು.

## ಚಿಂತಾಮಣಿ



ಜೆ.ಕೃಷ್ಣಾರೆಡ್ಡಿ

ಅವಳಿ ಜಿಲ್ಲೆಯ ಪ್ರಮುಖ ವಾಣಿಜ್ಯ ನಗರಿ ಚಿಂತಾಮಣಿ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕ ಜೆ.ಕೃಷ್ಣಾರೆಡ್ಡಿ ಆಡಳಿತ ನಡೆಸುತ್ತಿದ್ದಾರೆ. ಈ ಬಾರಿಯೂ ಇವರೇ ಅಭ್ಯರ್ಥಿ ಆಗಿದ್ದು ಗೆಲುವಿನ ಉತ್ಸಾಹದಲ್ಲಿದ್ದಾರೆ. ಕಾಂಗ್ರೆಸ್‌ನಿಂದ ಮಾಜಿ ಸಚಿವ ಕೃಷ್ಣಾರೆಡ್ಡಿ ಪುತ್ರಿ ವಾಣಿ ಅವರು ಆಕಾಂಕ್ಷಿ ಆಗಿದ್ದಾರೆ. ವೆಂಕಟೇಶರೆಡ್ಡಿ ಸಹಾ ಪೈಪೋಟಿ ನೀಡುತ್ತಿದ್ದಾರೆ. ಬಿಜೆಪಿ ಟಿಕೆಟ್‌ಗಾಗಿ ಮಾಡಿಕೆರೆ ಅರುಣ್‌ಬಾಬು ಹೋರಾಟ ನಡೆಸುತ್ತಿದ್ದಾರೆ.

### ಜಿಪಂ ಕ್ಷೇತ್ರ

| | | | |
|---|---|---|---|
| ಬಟ್ಲಹಳ್ಳಿ | ಕಾಂಗ್ರೆಸ್ | ಕೋನಪಲ್ಲಿ | ಕಾಂಗ್ರೆಸ್ |
| ಭೂಮಿಶೆಟ್ಟಹಳ್ಳಿ | ಕಾಂಗ್ರೆಸ್ | ಊಲವಾಡಿ | ಕಾಂಗ್ರೆಸ್ |
| ಚಿಲಕಲನೇರ್ಪು | ಕಾಂಗ್ರೆಸ್ | ಚಿಂತಾಮಣಿ ನಗರಸಭೆ | ಜೆಡಿಎಸ್ |
| ಕೈವಾರ | ಕಾಂಗ್ರೆಸ್ | | |

### ಹಿಂದಿನ ಫಲಿತಾಂಶ

2013ರಲ್ಲಿ ಪಕ್ಷೇತರ ಅಭ್ಯರ್ಥಿ ಡಾ.ಎಂ.ಸಿ.ಸುಧಾಕರ್ ಅವರನ್ನು ಜೆಡಿಎಸ್‌ನ ಜೆ.ಕೃಷ್ಣಾರೆಡ್ಡಿ ಅವರು 1,696 ಮತಗಳ ಅಂತರದಿಂದ ಸೋಲಿಸಿದ್ದರು. ಕೃಷ್ಣಾರೆಡ್ಡಿ 68,950 ಹಾಗೂ ಡಾ.ಸುಧಾಕರ್ 67,254 ಮತಗಳನ್ನು ಪಡೆದಿದ್ದರು. 2008ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಕೆ. ಎಂ.ಕೃಷ್ಣಾರೆಡ್ಡಿ ಅವರನ್ನು ಕಾಂಗ್ರೆಸ್ ಅಭ್ಯರ್ಥಿ ಡಾ.ಎಂ.ಸಿ.ಸುಧಾಕರ್ 1,246 ಮತಗಳಿಂದ ಮಣಿಸಿದ್ದರು.

## ಬಂಗಾರಪೇಟೆ



ನಾರಾಯಣಸ್ವಾಮಿ | ವೆಂಕಟಮುನಿಯಪ್ಪ | ಮಲ್ಲೇಶ್

ಶಾಸಕ ಎಸ್.ಎನ್.ನಾರಾಯಣಸ್ವಾಮಿ ಕಾಂಗ್ರೆಸ್‌ನಿಂದ ಗೆದ್ದು ಶಾಸಕರಾಗಿದ್ದು ಪುರಸಭೆ ಮತ್ತು ತಾಪಂ ಅನ್ನು ವಶಪಡಿಸಿಕೊಂಡಿದ್ದಾರೆ. ಅಭಿವೃದ್ಧಿ ಕಾಮಗಾರಿಗಳ ಮೂಲಕ ಗುರ್ತಿಸಿಕೊಂಡು ಮುಂದಿನ ಚುನಾವಣೆಗೆ ಟಿಕೆಟ್ ಗಟ್ಟಿ ಮಾಡಿಕೊಂಡಿದ್ದಾರೆ. ಆದರೆ ಜಿಪಂಯ 7 ಕ್ಷೇತ್ರಗಳಲ್ಲಿ ಎರಡು ಸ್ಥಾನ ಪಡೆದುಕೊಳ್ಳುವಲ್ಲಿ ಮಾತ್ರ ಸೀಮಿತರಾಗಿದ್ದಾರೆ. ತಾಪಂನಲ್ಲಿ ಬಿಜೆಪಿಗೆ ಬಹುಮತ ಇದ್ದರೂ ಕಾಂಗ್ರೆಸ್ ಆಡಳಿತ ನಡೆಸುತ್ತಿರುವುದು ವಿಶೇಷ. ಬಿಜೆಪಿಯಲ್ಲಿ ಮಾಜಿ ಶಾಸಕರಾದ ವೆಂಕಟಮುನಿಯಪ್ಪ ಮತ್ತು ಎಂ.ನಾರಾಯಣಸ್ವಾಮಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಮಲ್ಲೇಶ್ ಮುನಿಸ್ವಾಮಿ ಅವರಿಗೆ ಜೆಡಿಎಸ್ ಟಿಕೆಟ್ ಘೋಷಣೆ ಆಗಿದ್ದು,ಪ್ರಚಾರವೂ ಆರಂಭವಾಗಿದೆ.

### ಜಿಪಂ ಕ್ಷೇತ್ರ

| | | | |
|---|---|---|---|
| ಬೇತಮಂಗಲ | ಬಿಜೆಪಿ | ಕಾಮಸಮುದ್ರ | ಕಾಂಗ್ರೆಸ್ |
| ಬೂದಿಕೋಟೆ | ಕಾಂಗ್ರೆಸ್ | ಕ್ಯಾಸಂಬಳ್ಳಿ | ಬಿಜೆಪಿ |
| ಚಿಕ್ಕಂಕಂಡಹಳ್ಳಿ | ಬಿಜೆಪಿ | ಪಾರಾಂಡಹಳ್ಳಿ | ಬಿಜೆಪಿ |
| ದೊಡ್ಡೂರು ಕರಪನಹಳ್ಳಿ | ಬಿಜೆಪಿ | ಬಂಗಾರಪೇಟೆ ಪುರಸಭೆ | ಕಾಂಗ್ರೆಸ್ |

### ಹಿಂದಿನ ಫಲಿತಾಂಶ

2013ರಲ್ಲಿ ಕಾಂಗ್ರೆಸ್‌ನ ಎಸ್.ಎನ್.ನಾರಾಯಣಸ್ವಾಮಿ ಅವರು 28,377 ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿ ಎಂ.ನಾರಾಯಣಸ್ವಾಮಿ ಅವರನ್ನು ಸೋಲಿಸುವ ಮೂಲಕ ಶಾಸಕರಾಗಿದ್ದಾರೆ. ಶಾಸಕರು 71,570 ಮತ್ತು ಎಂ.ನಾರಾಯಣಸ್ವಾಮಿ 43,193 ಮತಗಳನ್ನು ಪಡೆದುಕೊಂಡಿದ್ದರು. 2008ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಂ.ನಾರಾಯಣಸ್ವಾಮಿ 7,505 ಮತಗಳ ಅಂತರಿಂದ ಬಿಜೆಪಿ ವೆಂಕಟಮುನಿಯಪ್ಪರನ್ನು ಪರಾಭವಗೊಳಿಸಿದ್ದರು.

## ಶಿಡ್ಲಘಟ್ಟ



ರಾಜಣ್ಣ

ರೇಷ್ಮೆನಗರಿ ಶಿಡ್ಲಘಟ್ಟ ಕ್ಷೇತ್ರವನ್ನು ಜೆಡಿಎಸ್‌ನ ಎಂ.ರಾಜಣ್ಣ ಪ್ರತಿನಿಧಿಸುತ್ತಿದ್ದು. ಈ ಬಾರಿಯೂ ಜೆಡಿಎಸ್‌ನಿಂದ ಅವರೇ ಸ್ಪರ್ಧಿಸಲಿದ್ದಾರೆ. ಕಾಂಗ್ರೆಸ್‌ನಿಂದ ಮಾಜಿ ಸಚಿವ ವಿ.ಮುನಿಯಪ್ಪ ಹುರಿಯಾಳು. ಬಿಜೆಪಿಯಿಂದ ಶಿವಕುಮಾರಗೌಡ ಸ್ಪರ್ಧಿಸುವ ನಿರೀಕ್ಷೆ ಇದೆ.

### ಜಿಪಂ ಕ್ಷೇತ್ರ

| | | | |
|---|---|---|---|
| ಅಬ್ಲೂಡು | ಜೆಡಿಎಸ್ | ಜಂಗಮಕೋಟೆ | ಕಾಂಗ್ರೆಸ್ |
| ಚೀಮಂಗಲ | ಜೆಡಿಎಸ್ | ಗಂಜಿಗುಂಟೆ | ಜೆಡಿಎಸ್ |
| ದಿಬ್ಬೂರಹಳ್ಳಿ | ಕಾಂಗ್ರೆಸ್ | ಶಿಡ್ಲಘಟ್ಟ ಪುರಸಭೆ | ಜೆಡಿಎಸ್ |

### ಹಿಂದಿನ ಫಲಿತಾಂಶ

2013ರಲ್ಲಿ ಜೆಡಿಎಸ್‌ನ ಎಂ.ರಾಜಣ್ಣ ಅವರು 15,479 ಮತಗಳ ಅಂತರದಿಂದ ಕಾಂಗ್ರೆಸ್‌ನ ಮಾಜಿ ಸಚಿವ ವಿ. ಮುನಿಯಪ್ಪ ಅವರನ್ನು ಸೋಲಿಸಿದ್ದರು. ರಾಜಣ್ಣ 77,931 ಹಾಗೂ ಮುನಿಯಪ್ಪ 62,452 ಮತಗಳನ್ನು ಪಡೆದುಕೊಂಡಿದ್ದರು. 2008ರಲ್ಲಿ ಮಾಜಿ ಸಚಿವ ವಿ. ಮುನಿಯಪ್ಪ ಅವರು 6,502 ಮತಗಳ ಅಂತರದಿಂದ ಜೆಡಿಎಸ್‌ನ ರಾಜಣ್ಣ ಅವರನ್ನು ಸೋಲಿಸಿದ್ದರು.

## ಬಿಜೆಪಿಯಲ್ಲಿ ಭಿನ್ನಮತ, ಜೆಡಿಎಸ್‌ನಲ್ಲಿ ಹುಡುಕಾಟ | ಕಮಲ ಯಾರ ಮುಡಿಗೆ?

# ಚಳ್ಳಕೆರೆಯಲ್ಲಿ ಬಲಾಢ್ಯವಾದ ಕಾಂಗ್ರೆಸ್

ಮಾಲತೇಶ್ ಅರಸ್/ರಾಮಾಂಜನೇಯ



ಟಿ. ರಘುಮೂರ್ತಿ | ಕೆ.ಟಿ. ಕುಮಾರಸ್ವಾಮಿ | ರವೀಶ್ | ಶಶಿಕುಮಾರ್

ಚಿತ್ರದುರ್ಗ ಜಿಲ್ಲೆಯಲ್ಲಿ ಸದ್ಯ ಭರ್ಜರಿ ಸದ್ದು ಮಾಡುತ್ತಿರುವ ಕ್ಷೇತ್ರ ಚಳ್ಳಕೆರೆ. ಕಣ್ಣಿಗೆ ಕಾಣುವಂತ ಕೆಲಸಗಳನ್ನು ಮಾಡುವ ಮೂಲಕ ಅಭಿವೃದ್ದಿಯಲ್ಲಿ ಸೈಎನಿಸಿಕೊಂಡಿದೆ. ಚಿತ್ರದುರ್ಗ ನಗರ ಸಂಪೂರ್ಣ ಹಾಳಾಗಿದ್ದು ರಾಜ್ಯದ ದೊಡ್ಡ ಹಳ್ಳಿಯಂತೆ ಬಿಂಬಿತವಾಗಿದೆ. ಆದರೆ ಚಳ್ಳಕೆರೆಯೇ ಜಿಲ್ಲಾ ಕೇಂದ್ರದಂತೆ ಮಿಂಚುತ್ತಿದೆ. ರಸ್ತೆಗಳೂ ನೋಡಿದರೇ ಥೇಟು ಹೈಟೆಕ್ ಸಿಟಿಗಳು ನೆನಪಾಗುತ್ತದೆ.

ಮಳೆ ಇಲ್ಲದೆ ಬರದಿಂದ ತತ್ತರಿಸಿ ಹೋಗಿದ್ದ ಕ್ಷೇತ್ರದಲ್ಲಿ ಮಳೆ ಬಂದು ಪಂಪ್ ಸೆಟ್‌ಗಳು ಹೆಚ್ಚಾಗಿದ್ದು ಅತ್ತ ರೈತರು ಖುಷಿಯಾಗಿದ್ದರೇ. ಇತ್ತ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ದಿನಕ್ಕೊಂದು ಹೊಸರೂಪ ಪಡೆಯುತ್ತಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಹೊರತು ಪಡಿಸಿದರೆ ಬಿಜೆಪಿ, ಜೆಡಿಎಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ಪೈಪೋಟಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಆಯಿಲ್‌ಸಿಟಿ ಎಂದೇ ಪ್ರಸಿದ್ದಿ ಪಡೆದ ಚಳ್ಳಕೆರೆ ಎಸ್‌ಟಿ ಮೀಸಲು ಕ್ಷೇತ್ರವಾಗಿದ್ದು, ಇಲ್ಲಿ ತಿಂಗಳಿಗೊಮ್ಮೆ ಆಕಾಂಕ್ಷಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಹೊಸಮುಖಗಳಿಗೆ ಮಾರು ಹೋಗದ ಮತದಾರದಿಂದ ಆಕಾಂಕ್ಷಿಗಳ ಮನಸ್ಸಿನಲ್ಲಿ ಗೊಂದಲಮಯವಾಗಿದೆ. ಇನ್ನೂ ಕಾಂಗ್ರೆಸ್‌ನಿಂದ ಮುಂದಿನ ಚುನಾವಣೆಯಲ್ಲಿ ಶಾಸಕ ಟಿ.ರಘುಮೂರ್ತಿಗೆ ಟಿಕೆಟ್ ಸಿಗುವುದು ಖಚಿತ ಎನ್ನುವುದನ್ನು, ಸಾಧನ ಸಮಾವೇಶಕ್ಕೆ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಘುಮೂರ್ತಿಯನ್ನು ಮತ್ತೊಮ್ಮೆ ವಿಧಾನ ಸೌಧಕ್ಕೆ ಕಳಿಸಿ ಎಂದು ಹೇಳಿದ್ದು ಸಾಕ್ಷಿಯಾಗಿದೆ.

ಕೈ ಪಾಳೆಯದಲ್ಲಿ ಯಾವುದೇ ಭಿನ್ನಮತ, ಪೈಪೋಟಿ ಇಲ್ಲವಾದರು, ಬಿಜೆಪಿಯಲ್ಲಿ ಮಾತ್ರ ಮಾಜಿ ಸಚಿವ ತಿಪ್ಪೇಸ್ವಾಮಿ ಅವರ ಮಗ ಕೆ.ಟಿ. ಕುಮಾರಸ್ವಾಮಿ ರಣಕಣದಲ್ಲಿ ಇದ್ದು ಪಕ್ಷದ ಅಭ್ಯರ್ಥಿಯೆಂದು ಗುರುತಿಸಿಕೊಂಡಿದ್ದಾರೆ. ಚುನಾವಣೆ ಪೂರ್ವದಲ್ಲಿ ಆರ್‌ಎಸ್‌ಎಸ್‌ನಿಂದ ನೇರ ಬಿಜೆಪಿಗೆ ಬಂದಿರುವ ಬಾಳೆಕಾಯಿ ರಾಮದಾಸ್, ಹಾಗೂ ಮೈನಿಂಗ್ ಮೂಲಕ ಭರ್ಜರಿ ಹಣ ಮಾಡಿರುವ ಮುತ್ತಯ್ಯ ನಾವೂ ಅಭ್ಯರ್ಥಿಗಳು ಎನ್ನುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಸೋಮಶೇಖರ್ ಮಂಡಿಮಠ ಮನೆಗೆ ಶಶಿಕುಮಾರ್ ಭೇಟಿ ನೀಡಿದ್ದು ಚರ್ಚೆಗೆ ಗ್ರಾಸವಾಗಿದೆ. ಸದ್ಯಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತಾಲೂಕಿನ ಜೆಡಿಎಸ್ ಟಿಕೆಟ್ ಯಾರಿಗೆ ಸಿಗಲಿದೆ ಎಂಬುದು ಚರ್ಚೆಯಾಗುತ್ತಿದೆ. ಕಮಲ ಯಾರ ಮುಡಿಗೆ ಸೇರುವುದೆಂಬುದು ತುಂಬಾ ಕುತೂಹಲದ ಸಂಗತಿಯಾಗಿದೆ.

ಜೆಡಿಎಸ್ ಟಿಕೆಟ್ ಪಡೆಯಲು ಕ್ಷೇತ್ರವಾಪ್ತಿ ಅಭ್ಯರ್ಥಿ ಎಂದು ಗುರುತಿಸಿಕೊಂಡಿದ್ದ ಬೆಂಗಳೂರು ಮೂಲದ ಗುತ್ತಿಗೆದಾರ ಮಗನಾದ ಎಂ.ರವೀಶ್ ಕುಮಾರ್ ಹಲವು ದಿನಗಳಿಂದ ಕ್ಷೇತ್ರಾದ್ಯಂತ ಜನಸಂಪರ್ಕ ಸಭೆ ನಡೆಸಿದ್ದಾರೆ. ಆದರೆ ಪರಶುರಾಮಪುರಕ್ಕೆ ಬಂದಿದ್ದ ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಕುಮಾರಸ್ವಾಮಿ ರವೀಶ್ ಹೆಸರನ್ನು ಪ್ರಸ್ತಾಪಿಸದೇ ಕೇವಲ ಜಿಪಂ ಸದಸ್ಯ ಮುತ್ತುರಾಜ್ ಹೊಗಳಿದ್ದು ರವೀಶ್‌ಗೆ ನುಂಗಲಾರದ ತುತ್ತಾಗಿತ್ತು. ಇದೀಗ ಮತ್ತೆ ರವೀಶ್ ಅಪರೂಪಕ್ಕೆ ಚಂದ್ರನಂತೆ ಕಾಣಿಸುತ್ತಿದ್ದಾರೆ. ಆದರೂ ಈ ಬಾರಿ ವರಿಷ್ಠರು ಯಾರಿಗೆ ಟಿಕೆಟ್ ಕೊಡುತ್ತಾರೆ ಎನ್ನುವುದು ತುಂಬಾ ಕುತೂಹಲ ಕೆರಳಿಸಿದೆ.

**ಆಕಾಂಕ್ಷಿಗಳು:** ಕಾಂಗ್ರೆಸ್‌ನಲ್ಲಿ ಹಾಲಿ ಶಾಸಕ ಟಿ. ರಘುಮೂರ್ತಿ ಸ್ಪರ್ಧಿಸುವುದು ಖಚಿತವಾದರೆ. ಚಿತ್ರನಟ, ಮಾಜಿ ಸಂಸದ ಶಶಿಕುಮಾರ್ ಚಳ್ಳಕೆರೆಯಲ್ಲಿ ನಾನೂ ಕಾಂಗ್ರೆಸ್ ಆಕಾಂಕ್ಷಿ ಎಂದು ಸುತ್ತುತ್ತಿದ್ದಾರೆ. ಬಿಜೆಪಿಯಲ್ಲಿ ಕೆ.ಟಿ.ಕುಮಾರಸ್ವಾಮಿ ರೆಡಿಯಾಗಿದ್ದಾರೆ. ಇನ್ನೂ ಜೆಡಿಎಸ್ ಟಿಕೆಟ್‌ಗಾಗಿ ಕಾಯುತ್ತಿರುವ ಎಂ.ರವೀಶ್ ಹೆಸರಿದೆ.

### ವಿರೋಧಿಗೆ ವಾಲ್ಮೀಕಿ ಪ್ರಶಸ್ತಿ

ರಾಜಕೀಯ ವಿರೋಧಿಯಾಗಿದ್ದರೂ ಬಿಜೆಪಿ ಹಿರಿಯ ಮುಖಂಡ, ಮಾಜಿ ಸಚಿವ ತಿಪ್ಪೇಸ್ವಾಮಿ ಅವರಿಗೆ ರಾಜ್ಯಮಟ್ಟದ ವಾಲ್ಮೀಕಿ ಪ್ರಶಸ್ತಿ ಕೊಡಿಸುವಲ್ಲಿ ರಘುಮೂರ್ತಿ ಪಾತ್ರ ಪ್ರಮುಖವಾದುದು. ಪಕ್ಷ ಮತ್ತು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ ಎಂಬ ಮಾತು ಕ್ಷೇತ್ರದಲ್ಲಿ ಕೇಳಿ ಬಂದಿದೆ ಎಂದು ರಾಜಕೀಯ ವಿಶ್ಲೇಷಕ ಜಡೇಕುಂಟೆ ಮಂಜುನಾಥ್ ತಿಳಿಸಿದ್ದಾರೆ.

### ಚಳ್ಳಕೆರೆಯಲ್ಲಿ ಶಶಿಗ್ರಹಣ

ಚಿತ್ರದುರ್ಗ ಜಿಲ್ಲೆಯ ಮಟ್ಟಿಗೆ ಸಿನಿಮಾ ನಟರು ಈ ಬಾರಿ ಅನೇಕರಿಗೆ ಅಡ್ಡಗಾಲಾಗುವ ಲಕ್ಷಣಗಳು ಕಂಡು ಬರುತ್ತಿವೆ. ನಟ ಶಶಿಕುಮಾರ್ ಈ ಬಾರಿ ಮೊಳಕಾಲ್ಮೂರು ಅಥವಾ ಚಳ್ಳಕೆರೆ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ತರುವುದಾಗಿ ಹೇಳುವ ಮೂಲಕ ಅವರಿಗೆ ಮುಳ್ಳಾಗಲಿದ್ದಾರೆ ಎನ್ನಲಾಗಿದೆ. 2008ರಲ್ಲಿ ಚಳ್ಳಕೆರೆ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಅಖಾಡಕ್ಕಿಳಿದು ಕೇವಲ ಇನ್ನೂರು ಮತಗಳಿಂದ ಸೋತಿದ್ದರು. ಕಳೆದ ಬಾರಿ ತಾಯಿಯ ಅನಾರೋಗ್ಯದಿಂದ ದೂರವಿದ್ದ ಶಶಿ ಈ ಬಾರಿ ಮತ್ತೆ ಚಳ್ಳಕೆರೆಯಲ್ಲಿ ಮೂಡಿದ್ದಾರೆ. ಕ್ಷೇತ್ರದ ವಿವಿಧ ಮುಖಂಡರ ಜತೆ ಪ್ರವಾಸ ಮಾಡುತ್ತಿದ್ದು ನಾನೂ ಆಕಾಂಕ್ಷಿ ಎನ್ನುತ್ತಿದ್ದಾರೆ.